ಪ್ರಧಾನ ದಿವಾಣಿ ನ್ಯಾಯಾಧಿಶರು ಹಾಗೂ ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಚಿಕ್ಕೋಡಿ. ಸಾಃ ಚಿಕ್ಕೋಡಿ.

| | |
|---|---|
| ಓ ಎಸ್ ನಂ | 163/20 |
| ವಾದಿ ಸಂ | ಪಿ.ಡಬ್ಲ್ಯೂ1 |
| ದಿನಾಂಕ | 21-11-2022 |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ಶ್ರೀ ಎ ಸಿ ಕೆ ನ್ಯಾಯವಾದಿಗಳಿಂದ.

ಕ್ರಯ ಕರಾರು ಪತ್ರದ ಹಾಜರು ಪಡಿಸಿದ್ದು ಅದನ್ನು ನಿ ಪಿ 22, ಅದರ ಭಾಷಾಂತರ ಪ್ರತಿಯನ್ನು ನಿ ಪಿ 22 A ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿ ಪಿ 22 ರ ಮೇಲೆ ಬರೆದು ಕೊಟ್ಟವರ ಹೆಬ್ಬೆಟ್ಟಿನ ಗುರುತು ಇರುತ್ತದೆ. ಅದರಂತೆ ಸಾಕ್ಷಿದಾರರಾದ ಕೆ ಡಿ ಪಾಟೀಲ ಹಾಗೂ ಚೌಗಲಾ ಎನ್ನುವವರ ಸಹಿ ಇರುತ್ತದೆ. ಅವುಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಸಹಿಗಳನ್ನು ನಿ ಪಿ 22 ಎ ಮತ್ತು ಬಿ ಎಂದು ಗುರುತಿಸಲಾಯಿತು. ನಿ ಪಿ 22 ರ ಮೇಲೆ ಅಣ್ಣಪ್ಪ ಈತನ ಮಗ ಬೂಪಾಲ ಎನ್ನುವವರ ಸಹಿ ಇರುತ್ತದೆ. ಸಾಕ್ಷಿ ಗುರುತಿಸಿದ ಸಹಿಗಳನ್ನು ನಿ ಪಿ 22 ಸಿ ಎಂದು ಗುರುತಿಸಲಾಯಿತು. ನಿ ಪಿ 22 ನ್ನು ಬರೆದ ದಸ್ತುರವರ ಸಹಿ ಇರುತ್ತದೆ ಸಾಕ್ಷಿ ಗುರುತಿಸಿದ ಸಹಿಗಳನ್ನು ನಿ ಪಿ 22 ಡಿ ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಪುರಸ್ಕರಿಸುವಂತೆ ಕೋರಿಕೊಳ್ಳುತ್ತೇನೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಂ ಪಿ ನ್ಯಾಯವಾದಿಗಳಿಂದ

ಪ್ರತಿವಾದಿ ಮತ್ತು ನ್ಯಾಯವಾದಿಗಳನ್ನು ಕರೆಸಲಾಯಿತು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧಿಶರು,
ಚಿಕ್ಕೋಡಿ.